## ನೋಂದಣಿ ಶುಲ್ಕ

ಪ್ರಾಧಿಕಾರವು ನಿಗದಿಪಡಿಸಿದ ನೋಂದಣಿ ಶುಲ್ಕದೊಂದಿಗೆ ಸಸ್ಯ ತಳಿಗಳ ನೋಂದಣಿಗೆ ಅರ್ಜಿ ಸಲ್ಲಿಸಬೇಕು. ವಿವಿಧ ತಳಿಗಳ ನೋಂದಣಿ ಶುಲ್ಕವು ಕೆಳಕಂಡಂತಿದೆ.

| ಕ್ರಮ ಸಂಖ್ಯೆ | ತಳಿಯ ವಿಧಗಳು | ನೋಂದಣಿ ಶುಲ್ಕ |
|---|---|---|
| 1. | ಬೀಜ ಕಾಯ್ದೆ 1966 ರ ಸೆಕ್ಷನ್ 5 ರ ಅಡಿಯಲ್ಲಿ ಸೂಚಿಸಲಾದ ಜಾತಿಯಲ್ಲಿರುವ ತಳಿ | ರೂ. 2000/- |
| 2. | ಹೊಸ ತಳಿ / ಅವಶ್ಯಕವಾಗಿ ಉತ್ಪತ್ತಿಯಾದ ತಳಿ (EDV)/ ಸಾಮಾನ್ಯ ಜ್ಞಾನವಿರುವ ಜಾತಿಯಲ್ಲಿರುವ ತಳಿ | ವೈಯುಕ್ತಿಕ – ರೂ. 7000/-<br>ಶೈಕ್ಷಣಿಕ – ರೂ. 10000/-<br>ವಾಣಿಜ್ಯ – ರೂ. 50000/- |
| 3. | ರೈತರ ತಳಿಗಳು | ಶುಲ್ಕ ರಹಿತ |

ತಳಿಗಳ ನೋಂದಣಿಯನ್ನು ನವೀಕರಿಸಲು ಪ್ರಾಧಿಕಾರದ ಪ್ಲಾಂಟ್ ವೆರೈಟಿ ಜರ್ನಲ್ ಆಫ್ ಇಂಡಿಯಾ ಮತ್ತು ದಿನಾಂಕ 15.06.2015 ರ ಭಾರತ ಸರ್ಕಾರದ ಗೆಜೆಟ್‌ನಲ್ಲಿ ಸೂಚಿಸಿರುವ ವಾರ್ಷಿಕ ಮತ್ತು ನವೀಕರಣ ಶುಲ್ಕವನ್ನು ಪಾವತಿಸಬೇಕಾಗಿರುತ್ತದೆ.

## DUS ಪರೀಕ್ಷಾ ಕೇಂದ್ರಗಳು

ವಿವಿಧ ಬೆಳೆಗಳ ನೋಂದಣಿ ಮಾಡಿದ ತಳಿಗಳ, ಉದಾಹರಣೆ ತಳಿಗಳನ್ನು ಸಂಗ್ರಹಿಸಲು ಮತ್ತು ಸಸ್ಯಾಭಿವೃದ್ಧಿ ಪಡಿಸಲು ಹಾಗೂ ಆ ಬೆಳೆಯ DUS ಮಾರ್ಗಸೂಚಿಯ ಪ್ರಕಾರ DUS ವಿವರಣೆಯನ್ನು ಸಿದ್ಧಪಡಿಸಲು ಪ್ರಾದಿಕಾರವು ವಿವಿಧ DUS ಪರೀಕ್ಷಾ ಕೇಂದ್ರಗಳನ್ನು ಗುರುತಿಸಿದೆ.

## ಸಂಬಾರ ಬೆಳೆಗಳ DUS ಪರೀಕ್ಷಾ ಕೇಂದ್ರಗಳು

| ಬೆಳೆ | DUS ಪರೀಕ್ಷಾ ಕೇಂದ್ರಗಳು | | |
|---|---|---|---|
| | I | II | III |
| ಕಾಳುಮೆಣಸು | ಐ.ಸಿ.ಎ.ಆರ್-ಐಐಎಸ್ಆರ್, ಕೋಜಿಕೋಡು | - | - |
| ಏಲಕ್ಕಿ | ಐ.ಸಿ.ಎ.ಆರ್-ಐಐಎಸ್ಆರ್, ಕೋಜಿಕೋಡು | ಐ.ಸಿ.ಆರ್.ಐ, ಮೈಲಾಡಂಪಾರ | - |
| ಶುಂಠಿ | ಐ.ಸಿ.ಎ.ಆರ್-ಐಐಎಸ್ಆರ್, ಕೋಜಿಕೋಡು | ಐ.ಸಿ.ಎ.ಆರ್-ಎನ್.ಇ.ಹೆಚ್, ಬಾರಾಪಾನಿ | - |
| ಅರಿಶಿಣ | ಐ.ಸಿ.ಎ.ಆರ್-ಐಐಎಸ್ಆರ್, ಕೋಜಿಕೋಡು | ಐ.ಸಿ.ಎ.ಆರ್-ಎನ್.ಇ.ಹೆಚ್, ಬಾರಾಪಾನಿ | - |
| ಜಾಯಿಕಾಯಿ | ಡಾ.ಬಿ.ಎಸ್.ಕೆ.ಕೆ.ವಿ, ದಪೋಲಿ | ಐ.ಸಿ.ಎ.ಆರ್-ಐಐಎಸ್ಆರ್, ಕೋಜಿಕೋಡು | ಸಿಸಿಎಆರ್ಐ, ಗೋವ |
| ಧನಿಯಾ / ಕೊತ್ತಂಬರಿ | ಐ.ಸಿ.ಎ.ಆರ್-ಎನ್ಆರ್‌ಸಿಎಸ್ಎಸ್, ಅಜ್ಮೀರ್ | ಐ.ಸಿ.ಎ.ಆರ್-ಡಿಎಮ್ಎಪಿಆರ್, ಆನಂದ್ | - |
| ಮೆಂತ್ಯ | ಐ.ಸಿ.ಎ.ಆರ್-ಎನ್ಆರ್‌ಸಿಎಸ್ಎಸ್, ಅಜ್ಮೀರ್ | ಐ.ಸಿ.ಎ.ಆರ್-ಡಿಎಮ್ಎಪಿಆರ್, ಆನಂದ್ | - |

## ನೋಂದಣಿ ಪ್ರಮಾಣಪತ್ರ

ನೀಡಲಾದ ನೋಂದಣಿ ಪ್ರಮಾಣಪತ್ರವು ಮರ ಮತ್ತು ಬಳ್ಳಿ ಜಾತಿಯ ಬೆಳೆಗಳಿಗೆ ಒಂಬತ್ತು ವರ್ಷಗಳವರೆಗೆ ಮತ್ತು ಇತರ ಬೆಳೆಗಳಿಗೆ ಆರು ವರ್ಷಗಳವರೆಗೆ ಮಾನ್ಯವಾಗಿರುತ್ತದೆ. ನೋಂದಣಿ ಅವಧಿ ಮುಗಿದ ನಂತರ ನೋಂದಣಿ ಶುಲ್ಕವನ್ನು ಪಾವತಿಸಿ ನೋಂದಣಿಯನ್ನು ನವೀಕರಿಸಬಹುದು ಆದರೆ ಮರ ಮತ್ತು ಬಳ್ಳಿ ಜಾತಿಯ ಬೆಳೆಗಳಿಗೆ ಬೀಜ ಕಾಯ್ದೆ, 1966 ರ ಅಡಿಯಲ್ಲಿ ನೋಂದಣಿಯಾದ ದಿನಾಂಕದಿಂದ 18 ವರ್ಷಗಳ ಅವಧಿಯನ್ನು ಮೀರುವಂತಿಲ್ಲ ಹಾಗೂ ಇತರೆ ಬೆಳೆಗಳಿಗೆ 15 ವರ್ಷಗಳ ಅವಧಿಯನ್ನು ಮೀರುವಂತಿಲ್ಲ.

| ಬೆಳೆ | ನೋಂದಾಯಿತ ತಳಿಗಳ ಸಂಖ್ಯೆ | ತಳಿಗಳು |
|---|---|---|
| ಕಾಳುಮೆಣಸು | 6 | ಐಐಎಸ್ಆರ್-ಮಲಬಾರ್ ಎಕ್ಸೆಲ್, ಐಐಎಸ್ಆರ್-ಥೆವಮ್, ಐಐಎಸ್ಆರ್-ಗಿರಿಮುಂಡ, ಪೆಪ್ಪರ್ ತೆಕ್ಕನ್, ಅಗಲಿ ಪೆಪ್ಪರ್, ಕುಂಬಕಲ್ ಸೆಲೆಕ್ಷನ್ |
| ಏಲಕ್ಕಿ | 9 | ಅಪ್ಪಂಗಲ-1, ಐಐಎಸ್ಆರ್-ವಿಜೇತ-1, ಐಐಎಸ್ಆರ್-ಅವಿನಾಶ್, ಪನಿಕುಲಂಗರ ಗ್ರೀನ್ ಬೋಲ್ಡ್ ನಂ. 1, ಪನಿಕುಲಂಗರ ಗ್ರೀನ್ ಬೋಲ್ಡ್ ನಂ. 2, ಎಲರಾಜನ್, ವಂಡರ್ ಕಾರ್ಡಮಮ್, ತಿರುಥಾಲಿ, ಎಲ ವೈಟ್ ಫ್ಲವರ್ |
| ಅರಿಶಿಣ | 4 | ವರ್ಣ, ಸೋನ, ಪಂಜಾಬ್ ಹಲ್ದಿ-1, ಪಂಜಾಬ್ ಹಲ್ದಿ-2 |
| ಧನಿಯಾ | 1 | ಪಂಜಾಬ್ ಸುಗಂಧ್ |

## ಸಸ್ಯ ತಳಿಗಳ ರಾಷ್ಟ್ರೀಯ ರಿಜಿಸ್ಟರ್

ಸಸ್ಯ ತಳಿಗಳ ರಾಷ್ಟ್ರೀಯ ರಿಜಿಸ್ಟರ್ ಅನ್ನು ನೋಂದಣಿಯ ಕೇಂದ್ರ ಕಛೇರಿಯಲ್ಲಿ ಇಡಲಾಗಿದೆ. ಈ ರಿಜಿಸ್ಟರ್‌ನಲ್ಲಿ ನೋಂದಾಯಿಸಿದ ಸಸ್ಯ ತಳಿಗಳ ಹೆಸರುಗಳ ಜೊತೆಗೆ ಆಯಾ ತಳಿ ವಿಜ್ಞಾನಿಗಳ ಹೆಸರು, ವಿಳಾಸ, ತಳಿಯ ಮೇಲೆ ವಿಜ್ಞಾನಿಗಳಿಗೆ ಇರುವ ಹಕ್ಕುಗಳು ಮತ್ತು ತಳಿಯ ವಿಶೇಷ ಗುಣಗಳ ಬಗ್ಗೆ ಮಾಹಿತಿಯನ್ನು ದಾಖಲು ಮಾಡಲಾಗಿದೆ. ರಾಷ್ಟ್ರೀಯ ತಳಿ ರಿಜಿಸ್ಟರ್ ಅನ್ನು ಕೇಂದ್ರ ಸರ್ಕಾರದ ನಿರ್ದೇಶನ ಮತ್ತು ಮೇಲ್ವಿಚಾರಣೆ ಮೇರೆಗೆ ಪ್ರಾಧಿಕಾರದ ನಿಯಂತ್ರಣ ಮತ್ತು ನಿರ್ವಹಣೆಯಲ್ಲಿ ಇಡಲಾಗಿದೆ.

ಕಾಯಿದೆಯ ಬಗ್ಗೆ ಹೊಸ ಹಾಗೂ ಹೆಚ್ಚಿನ ವಿವರಗಳು, ತಳಿ ನೋಂದಣಿ ಮಾಡಿಸಲು ಹಾಗೂ ಇತರ ಅರ್ಜಿ ನಮೂನೆಗಳು ಬೇಕಾದಲ್ಲಿ ಈ ಕೆಳಗೆ ತಿಳಿಸಿದ ವಿಳಾಸ ಅಥವಾ ವೆಬ್‌ಸೈಟ್ ಸಂಪರ್ಕಿಸಿ

The Registrar
Protection of Plant Varieties and Farmers' Rights Authority
NASC Complex, DPS Marg,
New Delhi – 110 012
Tel. No 011-25840777
Fax No. 011-25840478
E-mail: plantauthority@gmail.com
Website: www.plantauthority.gov.in

IISR-RS/EF/2020-1

ಐ.ಸಿ.ಎ.ಆರ್-ಭಾರತೀಯ ಸಂಬಾರ ಬೆಳೆಗಳ ಸಂಶೋಧನ ಸಂಸ್ಥೆ
ಪ್ರಾದೇಶಿಕ ಕೇಂದ್ರ, ಅಪ್ಪಂಗಳ, ಮಡಿಕೇರಿ

ಸಸ್ಯ ತಳಿ ಸಂರಕ್ಷಣೆ ಮತ್ತು ರೈತರ ಹಕ್ಕುಗಳ ಪ್ರಾಧಿಕಾರ, ನವದೆಹಲಿ

# ಸಸ್ಯ ತಳಿ ಸಂರಕ್ಷಣೆ ಮತ್ತು ರೈತರ ಹಕ್ಕುಗಳ ಕಾಯ್ದೆ



ಎಸ್. ಜೆ. ಅಂಕೆಗೌಡ
ಕೆ. ವಿ. ಸಜಿ, ಎಂ. ಎಸ್. ಶಿವಕುಮಾರ್
ಬಾಲಾಜಿ ರಾಜ್‌ಕುಮಾರ್, ಎಂ., ಹೊನ್ನಪ್ಪ ಆಸಂಗಿ
ಅಕ್ಷಿತ, ಹೆಚ್. ಜೆ., ಮೊಹಮದ್ ಫೈಸಲ್, ಪಿ.

ಐ.ಸಿ.ಎ.ಆರ್-ಭಾರತೀಯ ಸಂಬಾರ ಬೆಳೆಗಳ ಸಂಶೋಧನ ಸಂಸ್ಥೆ ಪ್ರಾದೇಶಿಕ ಕೇಂದ್ರ, ಅಪ್ಪಂಗಳ, ಮಡಿಕೇರಿ
ಫೆಬ್ರವರಿ-2020

# ಸಸ್ಯ ತಳಿ ಸಂರಕ್ಷಣೆ ಮತ್ತು ರೈತರ ಹಕ್ಕುಗಳ ಕಾಯ್ದೆ

ಸಸ್ಯ ತಳಿಗಳ ರಕ್ಷಣೆಗಾಗಿ, ರೈತರು ಮತ್ತು ಸಸ್ಯ ತಳಿವರ್ಧಕರ ಹಕ್ಕುಗಳಿಗೆ ಪರಿಣಾಮಕಾರಿ ವ್ಯವಸ್ಥೆಯನ್ನು ಸ್ಥಾಪಿಸಲು ಮತ್ತು ಹೊಸ ತಳಿಗಳ ಅಭಿವೃದ್ಧಿಯನ್ನು ಉತ್ತೇಜಿಸಲು ಹಾಗೂ ರೈತರ ಹಕ್ಕುಗಳನ್ನು ಗುರುತಿಸಲು ಮತ್ತು ರಕ್ಷಿಸಲು, ಭಾರತ ಸರ್ಕಾರವು 'ಸಸ್ಯ ತಳಿ ಸಂರಕ್ಷಣೆ ಮತ್ತು ರೈತರ ಹಕ್ಕುಗಳ ಕಾಯ್ದೆ (ಪಿಪಿವಿ ಮತ್ತು ಎಫ್‌ಆರ್‌ಎ) 2001' ರಲ್ಲಿ ಜಾರಿಗೆ ತಂದಿದೆ. ಭಾರತೀಯ ಶಾಸನವು 1978 ರ 'ಹೊಸ ಸಸ್ಯ ತಳಿಗಳ ಸಂರಕ್ಷಣೆಗಾಗಿ ಅಂತರರಾಷ್ಟ್ರೀಯ ಒಕ್ಕೂಟ (UPOV)' ಅನುಸರಣೆ ಮಾತ್ರವಲ್ಲ, ಸಾರ್ವಜನಿಕ ವಲಯದ ತಳಿವರ್ಧಕ ಸಂಸ್ಥೆಗಳ ಮತ್ತು ರೈತರ ಹಿತಾಸಕ್ತಿಗಳನ್ನು ಕಾಪಾಡಲು ಸಾಕಷ್ಟು ನಿಬಂಧನೆಗಳನ್ನು ಹೊಂದಿದೆ. ಈ ಶಾಸನವು ಸಸ್ಯ ತಳಿ ಸಂವರ್ಧನೆಯಲ್ಲಿ ವಾಣಿಜ್ಯ ತಳಿವರ್ಧಕರು ಮತ್ತು ರೈತರ ಕೊಡುಗೆಗಳನ್ನು ಗುರುತಿಸುತ್ತದೆ ಹಾಗೂ ಖಾಸಗಿ, ಸಾರ್ವಜನಿಕ ವಲಯಗಳು, ಸಂಶೋಧನಾ ಸಂಸ್ಥೆಗಳು, ರೈತರು ಮತ್ತು ಎಲ್ಲಾ ಪಾಲುದಾರರ ನಿರ್ದಿಷ್ಟ ಸಾಮಾಜಿಕ-ಆರ್ಥಿಕ ಹಿತಾಸಕ್ತಿಯನ್ನು ಬೆಂಬಲಿಸುವ ಸಲುವಾಗಿ TRIPs ಅನ್ನು ಕಾರ್ಯಗತಗೊಳಿಸಲು ಅನುವು ಮಾಡಿಕೊಡುತ್ತದೆ.

## ಪಿಪಿವಿ ಮತ್ತು ಎಫ್‌ಆರ್‌ಎ ಕಾಯ್ದೆಯ ಮೂಲ ಉದ್ದೇಶಗಳು

1. ಸಸ್ಯ ತಳಿಗಳ ರಕ್ಷಣೆ, ರೈತರು ಮತ್ತು ಸಸ್ಯ ತಳಿವರ್ಧಕರ ಹಕ್ಕುಗಳನ್ನು ಕಾಪಾಡಲು ಪರಿಣಾಮಕಾರಿ ವ್ಯವಸ್ಥೆಯನ್ನು ಸ್ಥಾಪಿಸುವುದು ಮತ್ತು ಹೊಸ ತಳಿಗಳ ಅಭಿವೃದ್ಧಿಗೆ ಉತ್ತೇಜನ ನೀಡುವುದು.
2. ಸಂಪನ್ಮೂಲಗಳ ಸಂರಕ್ಷಣೆ ಮತ್ತು ವಿವಿಧ ಬೆಳೆಗಳಲ್ಲಿ ತಳಿಗಳನ್ನು ಅಭಿವೃದ್ಧಿ ಪಡಿಸುವಲ್ಲಿ, ರೈತರು ತಲತಲಾಂತರಗಳಿಂದ ಹಲವಾರು ರೀತಿಯಲ್ಲಿ ನೀಡಿರುವ, ನೀಡುತ್ತಿರುವ ಕೊಡುಗೆಯನ್ನು ಗುರುತಿಸಿ ಅವರ ಹಕ್ಕುಗಳನ್ನು ಮಾನ್ಯ ಮಾಡುವುದು.
3. ದೇಶದಲ್ಲಿ ಕೃಷಿ ಅಭಿವೃದ್ಧಿಯನ್ನು ತ್ವರಿತಗೊಳಿಸುವುದು, ಸಸ್ಯ ತಳಿವರ್ಧಕರ ಹಕ್ಕುಗಳನ್ನು ರಕ್ಷಿಸುವುದು ಹಾಗೂ ಹೊಸ ಸಸ್ಯ ತಳಿಗಳ ಅಭಿವೃದ್ಧಿಗೆ ಸಾರ್ವಜನಿಕ ಮತ್ತು ಖಾಸಗಿ ವಲಯದಲ್ಲಿ ಸಂಶೋಧನೆ ಮತ್ತು ಅಭಿವೃದ್ಧಿಗೆ ಹೂಡಿಕೆಯನ್ನು ಉತ್ತೇಜಿಸುವುದು.
4. ರೈತರಿಗೆ ಉತ್ತಮ ಗುಣಮಟ್ಟದ ಬಿತ್ತನೆ ಬೀಜವನ್ನು ದೊರಕಿಸಿಕೊಡಲು ದೇಶದಲ್ಲಿ ಬೀಜ ಉದ್ಯಮದ ಬೆಳವಣಿಗೆಯನ್ನು ಸುಗಮಗೊಳಿಸುವುದು.

## ಕಾಯಿದೆ ಅನ್ವಯದಂತೆ ಇರುವ ಹಕ್ಕುಗಳು

1. **ತಳಿವರ್ಧಕನ ಹಕ್ಕುಗಳು:** ಪ್ರಾಧಿಕಾರದಲ್ಲಿ ಒಂದು ಬೆಳೆಯ ತಳಿಯೊಂದನ್ನು ನೋಂದಣಿ ಮಾಡಿ, ಧೃಡಿಕರಣ ಪತ್ರ ದೊರೆತ ನಂತರ ಸಂಬಂಧಪಟ್ಟ ತಳಿವರ್ಧಕನಿಗೆ ಕಾನೂನಿನ ಚೌಕಟ್ಟಿನಲ್ಲಿ ಆ ತಳಿಯ ಮೇಲಿನ ಬೀಜೋತ್ಪಾದನೆ, ಮಾರಾಟ, ಮಾರುಕಟ್ಟೆ, ವಿತರಣೆ, ರಫ್ತು ಮತ್ತು ಆಮದು ವಿಷಯಗಳ ಮೇಲೆ ಸಂಪೂರ್ಣ ಹಕ್ಕು ಸ್ವಾಮ್ಯ ದೊರೆಯುತ್ತದೆ. ಹಕ್ಕುಗಳನ್ನು ತಳಿವರ್ಧಕನು ಇತರರಿಗೆ ಮಾರಾಟ ಮಾಡಬಹುದು ಅಥವಾ ಗುತ್ತಿಗೆ ನೀಡಬಹುದಾಗಿದೆ ಹಾಗೂ ಈ ಹಕ್ಕುಗಳನ್ನು ಉಲ್ಲಂಘನೆ ಮಾಡಿದಲ್ಲಿ ಕಾನೂನಿನ ಮೊರೆ ಹೋಗಬಹುದು.

2. **ಸಂಶೋಧಕರ ಹಕ್ಕುಗಳು:** ಪ್ರಯೋಗ ಅಥವಾ ಸಂಶೋಧನೆ ನಡೆಸಲು ಸಂಶೋಧಕರು ಕಾಯ್ದೆಯಡಿ ನೋಂದಾಯಿತ ಯಾವುದೇ ತಳಿಯನ್ನು ಬಳಸಬಹುದು. ನೋಂದಾಯಿತ ತಳಿಯನ್ನು ಹೊಸ ತಳಿ ಅಭಿವೃದ್ಧಿಯಲ್ಲಿ ಸಹ ಮೂಲ ತಳಿಯಾಗಿ ಬಳಸಬಹುದು ಆದರೆ ಪುನರಾವರ್ತಿತ ಬಳಕೆಗೆ ನೋಂದಾಯಿತ ತಳಿವರ್ಧಕನ ಪೂರ್ವ ಅನುಮತಿಯ ಅಗತ್ಯವಿದೆ.

### 3. ರೈತರ ಹಕ್ಕುಗಳು

★ ಹೊಸ ತಳಿಯನ್ನು ವಿಕಸನಗೊಳಿಸಿದ ಅಥವಾ ಅಭಿವೃದ್ಧಿಪಡಿಸಿದ ರೈತನಿಗೆ ತಳಿವರ್ಧಕನಂತೆಯೇ ಆ ತಳಿಯನ್ನು ನೋಂದಾಯಿಸಲು ಮತ್ತು ಸಂರಕ್ಷಿಸಲು ಅರ್ಹತೆ ಇದೆ.

★ ರೈತರ ತಳಿಗಳನ್ನು ಸಹ ಅಸ್ತಿತ್ವದಲ್ಲಿರುವ ತಳಿಗಳಂತೆ ನೋಂದಾಯಿಸಬಹುದು.

★ ಪಿಪಿವಿ ಮತ್ತು ಎಫ್‌ಆರ್‌ಎ, 2001 ರ ಕಾಯ್ದೆಯ ಅಡಿಯಲ್ಲಿ ಸಂರಕ್ಷಿಸಲ್ಪಟ್ಟ ತಳಿಯ ಬೀಜದ ಕೃಷಿ ಉತ್ಪನ್ನವನ್ನು ಸಂಗ್ರಹಿಸ ಬಹುದು, ಬಳಸಬಹುದು, ಬಿತ್ತಬಹುದು, ಮರು ಬಿತ್ತನೆ ಮಾಡಬಹುದು, ಇತರೆ ರೈತರೊಂದಿಗೆ ಹಂಚಿಕೊಳ್ಳಬಹುದು ಅಥವಾ ಮಾರಾಟ ಮಾಡಬಹುದು; ಆದರೆ ಪಿಪಿವಿ ಮತ್ತು ಎಫ್‌ಆರ್‌ಎ, 2001 ರ ಕಾಯ್ದೆಯ ಅಡಿಯಲ್ಲಿ ಸಂರಕ್ಷಿಸಲ್ಪಟ್ಟ ಬ್ರ್ಯಾಂಡೆಡ್ ಬೀಜವನ್ನು ಮಾರಾಟ ಮಾಡುವ ಅರ್ಹತೆ ಇರುವುದಿಲ್ಲ.

★ ಸಸ್ಯ ತಳಿಗಳ ಸಂರಕ್ಷಣೆ ಮತ್ತು ತಳಿ ಸಂಪನ್ಮೂಲಗಳ ಕ್ರೋಢಿಕರಣಕ್ಕೆ ಸಹಕರಿಸಿದ ರೈತ ಅಥವಾ ರೈತ ಸಮುದಾಯ ಆಯೋಗ ನೀಡುವ ಪುರಸ್ಕಾರಕ್ಕೆ ಅರ್ಹರು.

★ ನೋಂದಣಿಸಿದ ಬೀಜದ ತಳಿ ನಿರೀಕ್ಷಿತ ಫಲಿತಾಂಶ ನೀಡದೆ ರೈತರಿಗೆ ನಷ್ಟ ಉಂಟಾದಾಗ ಕಾಯ್ದೆಯ ಸೆಕ್ಷನ್ 39(2) ರ ಅನ್ವಯ ಪರಿಹಾರ ಕಲ್ಪಿಸಿಕೊಡುವ ಅವಕಾಶವಿರುತ್ತದೆ.

★ ಪ್ರಾಧಿಕಾರ ಅಥವಾ ರಿಜಿಸ್ಟ್ರಾರ್ ಅಥವಾ ನ್ಯಾಯಮಂಡಳಿ ಅಥವಾ ಹೈಕೋರ್ಟ್ ನ ಮುಂದೆ ಯಾವುದೇ ಶುಲ್ಕವನ್ನು ಪಾವತಿಸಲು ರೈತನು ಹೊಣೆಗಾರನಾಗಿರುವುದಿಲ್ಲ.

## ಕಾಯಿದೆಯ ಅನುಷ್ಠಾನ

ಕೃಷಿ, ಸಹಕಾರ ಮತ್ತು ರೈತರ ಕಲ್ಯಾಣ ಇಲಾಖೆಯ ನಿಬಂಧನೆಗಳನ್ನು ಅನುಷ್ಠಾನಗೊಳಿಸಲು ಕೃಷಿ ಮತ್ತು ರೈತರ ಕಲ್ಯಾಣ ಸಚಿವಾಲಯವು ನವೆಂಬರ್ 11, 2005 ರಂದು ಸಸ್ಯ ತಳಿ ಸಂರಕ್ಷಣೆ ಮತ್ತು ರೈತರ ಹಕ್ಕುಗಳ ಪ್ರಾಧಿಕಾರವನ್ನು ಸ್ಥಾಪಿಸಿತು. ಅಧ್ಯಕ್ಷರು ಪ್ರಾಧಿಕಾರದ ಮುಖ್ಯ ಕಾರ್ಯನಿರ್ವಾಹಕರಾಗಿದ್ದಾರೆ. ಪ್ರಾಧಿಕಾರವು ಅಧ್ಯಕ್ಷರನ್ನು ಹೊರತುಪಡಿಸಿ ಭಾರತ ಸರ್ಕಾರದ ಅಧಿಸೂಚನೆಯಂತೆ 15 ಸದಸ್ಯರನ್ನು ಹೊಂದಿರುತ್ತದೆ. ಅವರಲ್ಲಿ 8 ಮಂದಿ ವಿವಿಧ ಇಲಾಖೆಗಳು / ಸಚಿವಾಲಯಗಳನ್ನು ಪ್ರತಿನಿಧಿಸುವ ಎಕ್ಸ್ ಆಫಿಶಿಯೊ ಸದಸ್ಯರು, ರಾಜ್ಯ ಕೃಷಿ ವಿಶ್ವ ವಿದ್ಯಾಲಯ ಮತ್ತು ರಾಜ್ಯ ಸರ್ಕಾರದಿಂದ ಮೂವರು ಹಾಗೂ ರೈತರಿಂದ, ಬುಡಕಟ್ಟು ಸಂಘಟನೆಯಿಂದ, ಬೀಜ ಉದ್ಯಮದಿಂದ ಮತ್ತು ಕೃಷಿ ಚಟುವಟಿಕೆಗಳಿಗೆ ಸಂಬಂಧಿಸಿದ ಮಹಿಳಾ ಸಂಸ್ಥೆಯಿಂದ ತಲಾ ಒಬ್ಬ ಪ್ರತಿನಿಧಿಯನ್ನು ಕೇಂದ್ರ ಸರ್ಕಾರವು ನೇಮಿಸುತ್ತದೆ. ರೆಜಿಸ್ಟ್ರಾರ್ ಜನರಲ್ ಅವರು ಪ್ರಾಧಿಕಾರದ ಎಕ್ಸ್- ಆಫಿಶಿಯೊ ಸದಸ್ಯ ಕಾರ್ಯದರ್ಶಿಯಾಗಿರುತ್ತಾರೆ.

## ಪ್ರಾಧಿಕಾರದ ಸಾಮಾನ್ಯ ಕಾರ್ಯಗಳು

→ ಹೊಸ ತಳಿಗಳು, ಮೂಲಭೂತವಾಗಿ ಪಡೆದ ತಳಿಗಳು ಹಾಗೂ ಅಸ್ತಿತ್ವದಲ್ಲಿರುವ ತಳಿಗಳನ್ನು ನೋಂದಾಯಿಸುವುದು

→ ಹೊಸ ಸಸ್ಯ ಪ್ರಭೇದಗಳಿಗೆ ವಿಶಿಷ್ಟತೆ, ಏಕರೂಪತೆ ಮತ್ತು ಸ್ಥಿರತೆ (ಆಗಖ) ಗುಣಗಳ ಪರೀಕ್ಷಾ ಮಾರ್ಗಸೂಚಿಗಳನ್ನು ಅಭಿವೃದ್ಧಿಪಡಿಸುವುದು

→ ನೋಂದಾಯಿತ ತಳಿಗಳ ಗುಣಲಕ್ಷಣ ಮತ್ತು ದಾಖಲಾತಿಗಳನ್ನು ಅಭಿವೃದ್ಧಿಪಡಿಸುವುದು

→ ಎಲ್ಲಾ ರೀತಿಯ ಸಸ್ಯ ತಳಿಗಳಿಗೆ ಕಡ್ಡಾಯವಾಗಿ ಕ್ಯಾಟಲಾಗ್ ಸಿದ್ಧಪಡಿಸುವುದು

→ ರೈತರ ತಳಿಗಳ ದಾಖಲೆ, ಸೂಚಿಕೆ ಮತ್ತು ಕ್ಯಾಟಲಾಗ್ ಅನ್ನು ಸಿದ್ದಪಡಿಸುವುದು

→ ಸಸ್ಯ ತಳಿಗಳ ಸಂರಕ್ಷಣೆ ಮತ್ತು ಸುಧಾರಣೆಯಲ್ಲಿ ತೊಡಗಿರುವ ರೈತರು, ರೈತ ಸಮುದಾಯ, ವಿಶೇಷವಾಗಿ ಬುಡಕಟ್ಟು ಮತ್ತು ಗ್ರಾಮೀಣ ಸಮುದಾಯವನ್ನು ಗುರುತಿಸಿ ಪುರಸ್ಕಾರ ನೀಡುವುದು

→ ಆರ್ಥಿಕ ಸಸ್ಯಗಳು ಮತ್ತು ಅವುಗಳ ಕಾಡು ಸಂಬಂಧಿಕರ ಸಸ್ಯ ಅನುವಂಶಿಕ ಸಂಪನ್ಮೂಲಗಳ ಸಂರಕ್ಷಣೆ

→ ಸಸ್ಯ ತಳಿಗಳ ರಾಷ್ಟ್ರೀಯ ದಾಖಲೆಯ ನಿರ್ವಹಣೆ

→ ರಾಷ್ಟ್ರೀಯ ಸಸ್ಯ ವಂಶಾಣು ಬ್ಯಾಂಕಿನ ನಿರ್ವಹಣೆ

## ಸಸ್ಯ ತಳಿಗಳ ನೋಂದಣಿ

ಸಸ್ಯ ತಳಿಯು ವಿಶಿಷ್ಟತೆ, ಏಕರೂಪತೆ ಮತ್ತು ಸ್ಥಿರತೆಯ ಮಾನದಂಡಗಳನ್ನು ಮೂಲಭೂತವಾಗಿ ಪೂರೈಸಿದರೆ ಈ ಕಾಯ್ದೆಯಡಿ ನೋಂದಣಿಗೆ ಅರ್ಹವಾಗಿರುತ್ತದೆ. ಸಸ್ಯ ತಳಿಯ ನೋಂದಣಿಗೆ ಕೇಂದ್ರ ಸರ್ಕಾರವು ಅಧಿಕೃತ ಗೆಜೆಟ್‌ನಲ್ಲಿ ಅಧಿಸೂಚನೆ ನೀಡುತ್ತದೆ. ಇಲ್ಲಿಯವರೆಗೆ, ಕೇಂದ್ರ ಸರ್ಕಾರವು 158 ಬೆಳೆ ಪ್ರಭೇದಗಳ ನೋಂದಣಿಗೆ ಅಧಿಸೂಚನೆ ನೀಡಿದೆ. ಪಿಪಿವಿ ಮತ್ತು ಎಫ್‌ಆರ್ ಪ್ರಾಧಿಕಾರವು "ಪ್ರಭೇದಗಳ ಪರೀಕ್ಷೆಗಾಗಿ ನಿರ್ದಿಷ್ಟವಾದ ವಿಶಿಷ್ಟತೆ, ಏಕರೂಪತೆ ಮತ್ತು ಸ್ಥಿರತೆಯ ಮಾನದಂಡ" ಗಳನ್ನು ಮತ್ತು ಪ್ರತ್ಯೇಕ ಬೆಳೆ ಪ್ರಭೇದಗಳಿಗೆ "ನಿರ್ದಿಷ್ಟ ಮಾರ್ಗಸೂಚಿ"ಗಳನ್ನು ಅಭಿವೃದ್ಧಿಪಡಿಸಿದೆ.

## ನೋಂದಣಿಸಬಹುದಾದ ಬೆಳೆ – ತಳಿಗಳು

ಕೇಂದ್ರ ಸರ್ಕಾರ ಗೆಜೆಟ್‌ನಲ್ಲಿ ಅಧಿಕೃತವಾಗಿ ಪ್ರಕಟ ಪಡಿಸುವ ಬೆಳೆಗಳ ತಳಿಗಳು ನೋಂದಣಿಗೆ ಅರ್ಹವಾಗಿರುತ್ತವೆ. ಅಂತಹ ಬೆಳೆಗಳ "ಹೊಸ ತಳಿಗಳು", "ಚಾಲ್ತಿಯಲ್ಲಿರುವ ತಳಿಗಳು", "ರೈತರ ತಳಿಗಳು" ಮತ್ತು ಅವಶ್ಯಕವಾಗಿ ಉತ್ಪತ್ತಿಯಾದ ತಳಿಗಳು ನೋಂದಣಿಗೆ ಅರ್ಹವಾಗಿರುತ್ತವೆ. ಗೆಜೆಟ್‌ನಲ್ಲಿ ಪ್ರಕಟವಾಗದ ಬೆಳೆಗಳ ತಳಿಗಳು ನೋಂದಣಿಗೆ ಅರ್ಹವಾಗಿರುವುದಿಲ್ಲ.